

بسم اللهِ الرّحمٰنِ الرّحيم

# ಸಯ್ಯದ್ ತಾಲೇ ಅಹ್ಮದ್ ಸಾಹಿಬ್: ತನ್ನ ಬದ್ಧತೆಗೆ ಸತ್ಯಸಂಧನಾದ ವ್ಯಕ್ತಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **03–09–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّالِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕಳೆದ ದಿನಗಳಲ್ಲಿ ನಮ್ಮ ಒಬ್ಬ ಬಹಳ ಪ್ರೀತಿಯ ಹುಡುಗ ಮತ್ತು ವಖ್‌ಫೇ ಝಿಂದಗಿಯಾದ ಸಯ್ಯದ್ ತಾಲಿಅ್ ಅಹ್ಮದ್ ಇಬ್ನು ಸಯ್ಯದ್ ಹಾಶಿಂ ಅಕ್ಬರ್ ಘಾನದಲ್ಲಿ ಶಹೀದ್ ಆದರು. **ಇನ್ನಾ ಲಿಲ್ಲಾಹಿವಇನ್ನಾ ಇಲೈಹಿರಾಜಿಊನ್**. ಆಗಸ್ಟ್ 23 ಮತ್ತು 24ರ ರಾತ್ರಿ ಎಂ.ಟಿ.ಎ.ಯ ಮೂವರು ಸದಸ್ಯರ ಸಂಘವು ಘಾನದ ನಾರ್ಥನ್ ರೀಜನಿನಲ್ಲಿ ರಿಕಾರ್ಡಿಂಗ್ ಮಾಡಿ ಕುಮಾಸಿಗೆ ಹಿಂದಿರುಗುತ್ತಿದ್ದಾಗ ರಸ್ತೆಯಲ್ಲಿ ಸುಮಾರು 7.15ಕ್ಕೆ ದರೋಡೆಗಾರರ ಫೈರಿಂಗ್‌ನಿಂದ ಸಯ್ಯದ್ ತಾಲಿಅ್ ಅಹ್ಮದ್ ಮತ್ತು ಉಮರ್ ಫಾರೂಖ್ ಗಾಯಗೊಂಡರು.

ಸಯ್ಯದ್ ತಾಲಿಅ್ ಅಹ್ಮದ್ ಸಾಹಿಬರು ಸನ್ಮಾನ್ಯ ಅಮತುಲ್ಲತೀಫ್ ಬೇಗಂ ಸಾಹಿಬ ಮತ್ತು ಸಯ್ಯದ್ ಮೀರ್ ಮುಹಮ್ಮದ್ ಅಹ್ಮದ್ ಸಾಹಿಬ್‌ರ ಮೊಮ್ಮಗನೂ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ)ರ ಹಾಗೂ ಹಝ್ರತ್ ಡಾಕ್ಟರ್ ಮೀರ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್‌ರ ಮೊಮ್ಮಗನ ಮಗನೂ ಆಗಿದ್ದರು. ಹಝ್ರತ್ ಮೀರ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್(ರ) ಹಝ್ರತ್ ಅಮ್ಮಾಜಾನ್(ರ)ರ ಕಿರಿಯ ಸಹೋದರ ಆಗಿದ್ದರು. ಈ ರೀತಿಯಲ್ಲಿ ಅವರ ಕುಟುಂಬ ಪರಂಪರೆಯು ಹಝ್ರತ್ ಅಮ್ಮಾಜಾನ್(ರ)ರಿಗೆ ಬಂದು ಸೇರುತ್ತದೆ ಹಾಗೂ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ)ರ ಕಾರಣದಿಂದ ಹಝ್ರತ್ ಮಸೀಹ್ ಮೌಊದ್‌ರೊಂದಿಗೆ ಸಂಬಂಧ ಸ್ಥಾಪಿತವಾಗುತ್ತದೆ. ತಾಲಿಅ್ ಸಾಹಿಬ್‌ರು ದಿವಂಗತ ಮಿರ್ಝಾ ಗ್ಹುಲಾಂ ಖಾದಿರ್ ಶಹೀದ್ ಸಾಹಿಬ್‌ರ ಅಳಿಯನೂ ಆಗಿದ್ದರು. ಅಲ್ಲಾಹನ ಅನುಗ್ರಹದಿಂದ ಮೂಸಿಯೂ ವಖ್ಫೇ ನೌ ಯೋಜನೆಯಲ್ಲಿ ಭಾಗಿಯೂ ಆಗಿದ್ದರು.

ಅವರು ಬಯೋ ಮೆಡಿಕಲ್ ಸಯನ್ಸ್‌ನಲ್ಲಿ ಡಿಗ್ರಿ ಪಡೆದ ನಂತರ ಜರ್ನಲಿಸಂನಲ್ಲಿ ಮಾಸ್ಟರ್ ಮಾಡಿದ್ದರು. 2013ರಲ್ಲಿ ಜೀವಿತವನ್ನು ವಖ್ಫ್ ಮಾಡಿದರು. ಅನಂತರ ವಿವಿಧ ಆಫೀಸ್‌ಗಳಲ್ಲಿ ಕೆಲಸ ಮಾಡಿದ ನಂತರ 2016ರಲ್ಲಿ ಎಂ.ಟಿ.ಎ. ನ್ಯೂಸ್‌ನಲ್ಲಿ ಪೂರ್ಣಾವಧಿಗೆ ನಿಯುಕ್ತಿಗೊಂಡರು. ಅಲ್ಲಿ ಅವರು ಡೊಕ್ಯುಮೆಂಟರಿ ಪ್ರೋಗ್ರಾಮುಗಳನ್ನು ತಯಾರಿಸುತ್ತಿದ್ದರು. ವಾರಕ್ಕೊಮ್ಮೆ ಪ್ರಸಾರಗೊಳ್ಳುವ **ದಿಸ್ ವೀಕ್ ವಿತ್ ಹುಝೂರ್** ಕಾರ್ಯಕ್ರಮವನ್ನು ಇವರೇ ಶುರುಮಾಡಿದ್ದರು. ತನ್ನ ಲೋಕಲ್ ಜಮಾಅತ್ ಮತ್ತು ಖುದ್ದಾಮುಲ್ ಅಹ್ಮದಿಯಾದ ಅಡಿಯಲ್ಲೂ ಅವರಿಗೆ ಸೇವೆ ಸಲ್ಲಿಸಲು ಸಂದರ್ಭ ಸಿಕ್ಕಿತ್ತು.

ಸಯ್ಯದ್ ತಾಲಿಅ್ ಅಹ್ಮದ್‌ರಿಗೆ ಉತ್ತಮ ಗುಣಮಟ್ಟಕ್ಕೆ ಅನುಸಾರ ತನ್ನ ಕೆಲಸವನ್ನು ಕೊನೆಗೊಳಿಸುವ ಅಸಾಮಾನ್ಯ ಆವೇಶವಿತ್ತು. ಅದಕ್ಕಾಗಿ ಅವರು ಯಾವುದೇ ಅಪಾಯದ ಪರಿವೆ ಮಾಡುತ್ತಿರಲಿಲ್ಲ. ಅವರ ಶಹಾದತಿನ ಘಟನೆಯಿಂದಲೂ ಇದು ಸ್ಪಷ್ಟವಾಗುತ್ತದೆ. ಟಮಾಲೆಯ ರೀಜನಲ್ ಮಿಶನರಿಯ ಹೇಳಿಕೆ ಪ್ರಕಾರ ಅವರೊಡನೆ ರಾತ್ರಿಯ ಯಾತ್ರೆಯಿಂದ ಬಿಟ್ಟುನಿಲ್ಲಲು ಸಲಹೆ ನೀಡಲಾಗಿತ್ತು. ಆದಾಗ್ಯೂ ಅವರು ಸಮಯದ ಕೊರತೆಯ ಕಾರಣ ಮತ್ತು ಬಹಳಷ್ಟು ಕೆಲಸದ ಕಾರಣದಿಂದ ಯಾತ್ರೆ ಮಾಡುವುದೇ ಲೇಸು ಎಂದು ಭಾವಿಸಿದ್ದರು. ಜಮಾಅತಿನ ಸಂಪತ್ತು ಮತ್ತು ಸಮಯಕ್ಕೆ ಅವರು ಎಷ್ಟು ಬೆಲೆಕೊಡುತ್ತಿದ್ದರು ಎಂದರೆ ರಸ್ತೆಯಲ್ಲೂ ಲ್ಯಾಪ್‌ಟಾಪಿನಲ್ಲಿ ತನ್ನ ಕೆಲಸವನ್ನು ಮಾಡುತ್ತಿದ್ದರು. ಎಂಪಾಹ ಜಂಕ್ಷನಿನ ಸಮೀಪ ದರೋಡೆಕೋರರು ವಾಹನದ ಮೇಲೆ ಫೈರಿಂಗ್ ಮಾಡಿದರು. ಅವರ ಸೊಂಟದಲ್ಲಿ ಗುಂಡು ತಗುಲಿತು ಮತ್ತು ಬಹಳಷ್ಟು ರಕ್ತ ಹರಿಯಿತು. ಮೊದಲು ಪೋಲಿ ಕ್ಲಿನಿಕ್‌ನಲ್ಲಿ ಅವರ ಮೆಡಿಕಲ್ ಚಿಕಿತ್ಸೆ ನಡೆಯಿತು. ಅನಂತರ ಟಮಾಲೆ ಟೀಚಿಂಗ್ ಆಸ್ಪತ್ರೆಗೆ ಹೋಗುವ ಮಾರ್ಗದಲ್ಲಿ ಘಟನೆ ನಡೆದ ಸುಮಾರು ನಾಲ್ಕುವರೆ ಗಂಟೆಗಳ ನಂತರ ಅವರು ನಿಧನಗೊಂಡರು.

ಉಮರ್ ಸಾಹಿಬ್‌ರು ಹೇಳುತ್ತಾರೆ: ತಾಲಿಅ್ ಸಾಹಿಬ್‌ರ ತಲೆ ನನ್ನ ಮಡಿಯಲ್ಲಿತ್ತು. ಅವರು ಪದೇ ಪದೇ ನನ್ನೊಡನೆ ಹೀಗೆ ಕೇಳುತ್ತಿದ್ದರು: ನಮ್ಮ ಈ ಘಟನೆಯ ಬಗ್ಗೆ ಹುಝೂರಿಗೆ ತಿಳಿಸಲಾಗಿದೆಯೇ? ರಕ್ತ ಸುರಿಯುತ್ತಿದ್ದೂ ಮಿತಿಮೀರಿದ ನೋವಿನಲ್ಲೂ ಆಸ್ಪತ್ರೆಗೆ ಹೋಗುತ್ತಿರುವಾಗ ಅವರು ತನ್ನ ಸಂಗಡಿಗರೊಡನೆ ಹೀಗೆ ಹೇಳಿದರು: ಫೈರಿಂಗ್ ವೇಳೆ ನಾನು ಲ್ಯಾಪ್‌ಟಾಪ್ ಮತ್ತು ಇತರ ಬೆಲೆಬಾಳುವ ವಸ್ತುಗಳನ್ನು ಹಿಂದಿನ ಸೀಟಿನ ಅಡಿಗೆ ನೂಕಿದ್ದೇನೆ. ಅಲ್ಲಿ ಅವುಗಳು ಸುರಕ್ಷಿತವಾಗಿವೆ. ಅವುಗಳನ್ನು ಅಲ್ಲಿಂದ ತೆಗೆಯಿರಿ. ಇಷ್ಟು ಹೆಚ್ಚು ಗಾಯಗೊಂಡರೂ ಅವರಿಗೆ ಜಮಾಅತಿನ ಸಂಪತ್ತುಗಳು ಮತ್ತು ಚಾರಿತ್ರಿಕ ದಸ್ತಾವೇಜುಗಳು ಸುರಕ್ಷಿತಗೊಳಿಸುವ ಚಿಂತೆಯಿತ್ತು. ಉಮರ್ ಫಾರೂಖ್ ಸಾಹಿಬ್‌ರು ಹೇಳುತ್ತಾರೆ: ರಸ್ತೆಯಲ್ಲಿ ಪದೇ ಪದೇ ನನ್ನೊಡನೆ ಹೀಗೆ ಹೇಳುತ್ತಿದ್ದರು. "ಹುಝೂರೊಡನೆ ಹೇಳಿರಿ, ನಾನು ಅವರನ್ನು ಪ್ರೀತಿಸುತ್ತೇನೆ. ನನ್ನ ಕುಟುಂಬದೊಡನೆ ಹೇಳಿರಿ, ನಾನು ಅವರನ್ನು ಪ್ರೀತಿಸುತ್ತೇನೆ."

ಅವರು ನಮ್ಮಿಂದ ಅಗಲಿದ ಒಂದು ವಜ್ರವಾಗಿತ್ತು. ಅಲ್ಲಾಹನು ಜಮಾಅತಿಗೆ ಖಿಲಾಫತಿನ ನಿಷ್ಠಾವಂತ ಮತ್ತು ದೀನಿಗೆ ಆದ್ಯತೆ ನೀಡುವವರನ್ನು ನೀಡುತ್ತಿರಲಿ. ಆದರೆ ಅವರ ನಷ್ಟವು ನಡುಗಿಸುವಂತಿದೆ. ಅವರು ವಖ್ಫಿನ ನೈಜತೆಯನ್ನು ಅರಿಯುವ ಮತ್ತು ತನ್ನ ಪ್ರತಿಜ್ಞೆಯನ್ನು ಯಥಾರ್ಥ ರೀತಿಯಲ್ಲಿ ನಿಭಾಯಿಸುವ ಪ್ರಿಯ ವ್ಯಕ್ತಿತ್ವವಾಗಿದ್ದರು. ಅವರನ್ನು ನೋಡಿ ನನಗೆ ಅಚ್ಚರಿಯಾಗುತ್ತದೆ ಮತ್ತು ಈಗಲೂ ಆಗುತ್ತಿದೆ. ಭೌತಿಕ

ವಾತಾವರಣದಲ್ಲಿ ಬೆಳೆದ ಹುಡುಗ ತನ್ನ ವಖ್ಫನ್ನು ಅರಿತನು, ಅದನ್ನು ನಿರ್ವಹಿಸಿದನು ಮತ್ತು ಅದನ್ನು ಚರಮಸೀಮೆಗೆ ತಲುಪಿಸಿದನು. ತನ್ನ ಜೀವಿತದ ಭಾಗವನ್ನಾಗಿ ಮಾಡಿಕೊಳ್ಳಲು ಅವರು ಹಿರಿಯರ ಸಂಭವಗಳನ್ನು ಓದುತ್ತಿದ್ದರು. ಖಿಲಾಫತಿನೊಂದಿಗೆ ನಿಷ್ಠೆ ಮತ್ತು ಪ್ರಾಮಾಣಿಕತೆಯ ಇಂತಹ ಪರಿಜ್ಞಾನವು ಧರ್ಮದ ಆಳವಾದ ಅರಿವು ಇರುವವರಿಗೂ ಗೊತ್ತಿರುವುದಿಲ್ಲ. ಅವರು ಖಿಲಾಫತಿಗೆ ನಿಷ್ಠಾವಂತರಾಗಿದ್ದರು. ಅದರಲ್ಲಿ ಎಷ್ಟು ಪ್ರಾಮಾಣಿಕರಾಗಿದ್ದರು ಎಂದರೆ, ಜೀವನ್ಮರಣದ ಅವಸ್ಥೆಯಲ್ಲೂ ತನ್ನ ಕೊನೆಯ ವಾಕ್ಯದಲ್ಲಿ ಅವರಿಗೆ ಖಲೀಫತುಲ್ ಮಸೀಹ್‌ರೊಂದಿಗೆ ಪ್ರೀತಿ ಮತ್ತು ನಿಷ್ಠೆಯದ್ದೇ ಆಲೋಚನೆಯಿತ್ತು. ತನ್ನ ಮಕ್ಕಳ ಮತ್ತು ತನ್ನ ಕುಟುಂಬದ ಬಗ್ಗೆ ಎಲ್ಲರಿಗೂ ನೆನಪು ಬರುತ್ತದೆ. ಆದರೆ ಪ್ರತಿ ಬಾರಿ ತನ್ನ ಮಕ್ಕಳ ಮತ್ತು ಕುಟುಂಬಕ್ಕಿಂತ ಮುಂಚೆ ಅಥವಾ ಅದರೊಂದಿಗೆ ಖಲೀಫತುಲ್ ಮಸೀಹ್‌ರ ಬಗ್ಗೆ ತನ್ನ ಪ್ರೀತಿಯನ್ನು ಪ್ರಕಟಿಸುವುದು ಬಹುಶಃ ಕೆಲವರಿಗೆ ಮಾತ್ರ ಸಾಧ್ಯ. ಸುಮಾರು ಎರಡು ಮೂರು ವರ್ಷಗಳ ಹಿಂದೆ ಅವರು ಖಿಲಾಫತಿನೊಂದಿಗೆ ಸಂಬಂಧ ಮತ್ತು ಪ್ರೀತಿಯನ್ನು ವ್ಯಕ್ತಪಡಿಸುವ ಒಂದು ಪದ್ಯವನ್ನು ಬರೆದಿದ್ದರು. ಅದನ್ನು ಅವರು ತನ್ನೊಬ್ಬ ಸ್ನೇಹಿತನಿಗೆ ಕೊಟ್ಟು ತನ್ನ ಬಳಿ ಇರಿಸಲು ಹಾಗೂ ಯಾರಿಗೂ ತೋರಿಸದಿರಲು ಹೇಳಿದ್ದರು. ನಾನು ಖಲೀಫತುಲ್ ಮಸೀಹ್‌ರನ್ನು ಅತ್ಯಂತ ಹೆಚ್ಚು ಪ್ರೀತಿಸುತ್ತೇನೆ ಎಂಬುದಾಗಿ ಆ ಪದ್ಯ ಶುರುವಾಗುತ್ತಿತ್ತು ಹಾಗೂ ಖಲೀಫತುಲ್ ಮಸೀಹ್‌ರೊಂದಿಗೆ ನನಗೆ ಇರುವ ಪ್ರೀತಿ ಮತ್ತು ಪ್ರೇಮ ಅವರಿಗೆ ಎಂದಿಗೂ ಗೊತ್ತಾಗಲಿಕ್ಕಿಲ್ಲ ಎಂಬುದಾಗಿ ಆ ಪದ್ಯವನ್ನು ಕೊನೆಗೊಳಿಸಲಾಗಿತ್ತು.

ಹೇ ಪ್ರಿಯ ತಾಲಿಅ್, ನೀನು ಈ ಪದ್ಯದ ಕೊನೆಯ ಸಾಲುಗಳನ್ನು ಬರೆಯುದಕ್ಕೆ ಮುಂಚೆಯೂ ನನಗೆ ಅದು ಗೊತ್ತಿತ್ತು. ನಿನ್ನ ಪ್ರತಿ ಕೃತ್ಯ, ಪ್ರತಿ ಚಲನವಲನ, ನಿನ್ನ ಕಣ್ಣುಗಳ ಹೊಳಪು ಹಾಗೂ ನಿನ್ನ ಮುಖದ ವಿಸ್ಮಯಕರವಾದೊಂದು ಕಾಂತಿಯಿಂದ ಆ ಸ್ನೇಹದ ಪ್ರಕಟನೆಯಾಗುತ್ತಿತ್ತು. ನಾನು ಬಹುಶಃ ಯಾರಲ್ಲೂ ಈ ಪ್ರೀತಿಯ ಪ್ರಕಟನೆಯನ್ನು ಕಂಡಿಲ್ಲ.

ಅವರಿಗೆ ತನ್ನ ಕೆಲಸದಲ್ಲಿ ಪ್ರೀತಿಯಿರಲು ಕಾರಣವೇನೆಂದರೆ, ಅದರ ಮೂಲಕ ಇಸ್ಲಾಂ ಮತ್ತು ಮುಹಮ್ಮದ್ ಪೈಗಂಬರ್(ಸ)ರ ಧರ್ಮವನ್ನು ಸಂರಕ್ಷಿಸಬೇಕು ಎಂಬುದಕ್ಕೆ ಆಗಿತ್ತು. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್‌ರ ಮಯ್ಯತ್ತನ್ನು ದಫನ್ ಮಾಡುವಾಗ ಅವನು ನನ್ನ ಬಲಗಡೆಗೆ ಬಂದು ನಿಂತನು. ಅವನು ಯಾರೆಂದು ನನಗೆ ಗೊತ್ತಿರಲಿಲ್ಲ. "ನಾನು ಖಲೀಫತುಲ್ ಮಸೀಹ್‌ರ ಸಹಾಯಕನಾಗಬೇಕು" ಎಂದು ಆ ಸಂದರ್ಭದಲ್ಲಿ ಹದಿಮೂರು ವರ್ಷ ಪ್ರಾಯದ ಆ ಹುಡುಗನು ಬಹುಶಃ ಪ್ರತಿಜ್ಞೆ ಮಾಡಿರಬಹುದು. ಅವನು ಶಿಕ್ಷಣವನ್ನು ಪೂರ್ತಿ ಮಾಡಿದನು ಮತ್ತು ಹಲವಾರು ವರ್ಷಗಳ ನಂತರ ಈ ಪ್ರತಿಜ್ಞೆಯನ್ನು ನೆರವೇರಿಸಿದನು. ಬಹಳ ಉತ್ತಮವಾಗಿ ನಿಭಾಯಿಸಿದನು. "ನಾನು ಖಿಲಾಫತಿನ ನೈಜ ಸಹಾಯಕ"ನೆಂದು ಶಹೀದ್ ಆಗಿ ತೋರಿಸಿಕೊಟ್ಟನು.

ಹೇ ಪ್ರಿಯ ತಾಲಿಅ್, ನಾನು ಸಾಕ್ಷ್ಯವಹಿಸುತ್ತೇನೆ; ನೀನು ಖಂಡಿತವಾಗಿಯೂ ನಿನ್ನ ವಖ್ಫ್ ಮತ್ತು ಪ್ರತಿಜ್ಞೆಯ ಅತ್ಯುನ್ನತ ಮಟ್ಟವನ್ನು ಗಳಿಸಿದ್ದೀಯ.

ಅವರು ಖಲೀಫತುಲ್ ಮಸೀಹ್‌ರ ಮಾತುಗಳನ್ನು ಅನುಸರಿಸಲು ಎಷ್ಟು ಪ್ರಯತ್ನಿಸುತ್ತಿದ್ದರು ಎಂಬುದರ ಅಂದಾಜು ಈ ಸಂಗತಿಯಿಂದ ಆಗುತ್ತದೆ. ಅದೇನೆಂದರೆ, ಒಂದು ಗಂಟೆಯಷ್ಟು ಸಮಯ ತಹಜ್ಜುದ್ ನಮಾಝ್ ನಿರ್ವಹಿಸಲು ಪ್ರಯತ್ನಿಸಬೇಕೆಂದು ನಾನು ಕೆಲವು ಮೀಟಿಂಗ್‌ಗಳಲ್ಲಿ ಮುರಬ್ಬಿಯರೊಂದಿಗೆ ಹೇಳಿದ್ದೆ. ನಾನು ಹೇಳಿದಂತೆ ಮಾಡುವ ಪ್ರಯತ್ನವನ್ನು ಪ್ರಿಯ ತಾಲಿಅ್ ಅಹ್ಮದ್ ಶುರುಮಾಡಿದರು.

ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕುಟುಂಬದ ಒಬ್ಬ ವ್ಯಕ್ತಿ ಎಂಬ ನೆಲೆಯಲ್ಲಿ, ಹಝ್ರತ್ ಮಸೀಹ್ ಮೌಊದ್‌ರ ಕುಟುಂಬದ ಸದಸ್ಯರಿಗೂ ನಿಷ್ಠೆ ಮತ್ತು ಪ್ರಾಮಾಣಿಕತೆಯ ಮಾದರಿಯನ್ನು ಸ್ಥಾಪಿಸಿದರು. ಅವರು ವಖ್ಫೇ ಝಿಂದಗಿಗಳಿಗೆ ಆಶ್ಚರ್ಯಕರವಾದ ಮಾದರಿಯಾಗಿದ್ದರು. ಹಣದ ಕೊರತೆ ಅಥವಾ ಅಲವೆನ್ಸ್ ಕಡಿಮೆಯಿರುವುದರ ಬಗ್ಗೆ ಅವರು ಎಂದಿಗೂ ದೂರುತ್ತಿರಲಿಲ್ಲ. "ನನಗೆ ದಾರಿದ್ರ್ಯವನ್ನು ನೀಡಬೇಡ" ಎಂದೇ ಅವರು ದುಆ ಮಾಡುತ್ತಿದ್ದರು. ನಾನು ಅವರ ನಿಷ್ಠೆಯನ್ನು ಸ್ವಲ್ಪಮಟ್ಟಿಗೆ ತಿಳಿದಿದ್ದೆ. ಆದರೆ ಅವರ ಒಳಿತು ಮತ್ತು ದೇವಭಕ್ತಿಯ ಮಟ್ಟ ಬಹಳಷ್ಟು ಉನ್ನತವಾಗಿತ್ತು.

ಆಮಿರ್ ಸಫೀರ್ ಸಾಹಿಬ್‌ರು ಹೇಳುತ್ತಾರೆ: ತಾಲಿಅ್ ಬಹಳಷ್ಟು ಯೋಗ್ಯತೆಗಳನ್ನು ಹೊಂದಿದ್ದರು ಎಂದು ನಾನು ಕಣ್ಣಾರೆ ನೋಡಿದ್ದೇನೆ. ಅವರು ಯಾವುದಾದರೂ ಪ್ರೋಜೆಕ್ಟನ್ನು ಶೂನ್ಯದಿಂದ ಶುರುಮಾಡುತ್ತಿದ್ದರು ಮತ್ತು ಅದನ್ನು ಹೆಮ್ಮೆಪಡುವಂತಹ ಸಂಗತಿಯನ್ನಾಗಿ ಮಾಡುತ್ತಿದ್ದರು. ಯು.ಕೆ.ಯ ಖುದ್ದಾಮುಲ್ ಅಹ್ಮದಿಯ ಸದರ್ ಆದ ಖುದ್ದೂಸ್ ಆರಿಫ್ ಸಾಹಿಬ್ ಹೇಳುತ್ತಾರೆ: ಚಿಕ್ಕಂದಿನಿಂದ ನನಗೆ ಅವರೊಂದಿಗೆ ಸಂಬಂಧವಿತ್ತು. ಅವರು ಹಝ್ರತ್ ಮಲಿಕ್ ಗುಲಾಂ ಫರೀದ್ ಸಾಹಿಬ್‌ರ ಶಾರ್ಟ್ ಕಮೆಂಟರಿ ಹಾಗೂ ಪವಿತ್ರ ಖುರ್‌ಆನಿನ ಫೈ ವಾಲ್ಯುಂ ಕಮೆಂಟರಿಯನ್ನು ಬಹಳ ವಿಶದವಾಗಿ ಓದಿದ್ದರು. ಪತ್ನಿಯಾದ ಸುತೂತ್ ಸಾಹಿಬ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರೊಡನೆ ಅವರಿಗೆ ಎಷ್ಟು ಪ್ರೀತಿಯಿತ್ತು ಎಂದರೆ, ಹಝ್ರತ್ ಪೈಗಂಬರ್(ಸ)ರ ಬಗ್ಗೆ ಪ್ರಸ್ತಾಪಿಸುವಾಗ ಅವರು ಮಕ್ಕಳ ಹಾಗೆ ಅಳುತ್ತಿದ್ದರು. ಮಗನಾದ ತಲಾಲ್‌ನಿಗೆ ಹಝ್ರತ್ ಪೈಗಂಬರ್(ಸ)ರ ಕಥೆಗಳನ್ನು ಹೇಳಿಕೊಡುವಾಗ ಬಿಕ್ಕಿ ಬಿಕ್ಕಿ ಅಳುತ್ತಿದ್ದರು. ಮಗನು ಕ್ರೈಸ್ತರ ಸ್ಕೂಲಿನಲ್ಲಿ ಕಲಿಯುತ್ತಿದ್ದ ಕಾರಣದಿಂದ ಅವನನ್ನು ಸ್ಕೂಲಿಗೆ ಕೊಂಡುಹೋಗುವಾಗ ಸೂರಃ ಇಖ್‌ಲಾಸ್ ಓದಿಸುತ್ತಿದ್ದರು. ಖಲೀಫತುಲ್ ಮಸೀಹ್‌ರಿಗೆ ಯಾವುದಾದರೂ ಮಾತು ಇಷ್ಟವಾಗಿಲ್ಲವೆಂದು ಅವರಿಗೆ ಅನಿಸಿದರೆ, ತಹಜ್ಜುದ್ ನಮಾಝಿನಲ್ಲಿ ಬಿಕ್ಕಳಿಸಿ ಅಲ್ಲಾಹನಲ್ಲಿ ಕ್ಷಮೆಯಾಚನೆ ನಡೆಸುತ್ತಿದ್ದರು. ಅಲ್ಲಾಹನ ಮೇಲೆ ಅಸಾಧಾರಣವಾದ ಭರವಸೆಯಿತ್ತು ಹಾಗೂ ಅಲ್ಲಾಹನು ಅವರ ಆವಶ್ಯಕತೆಗಳನ್ನು ಈಡೇರಿಸುತ್ತಿದ್ದನು.

ಶಹೀದ್ ತಾಲಿಅ್‌ರ ತಂದೆ ಬರೆಯುತ್ತಾರೆ: ಅಲ್‌ಹಮ್ದುಲಿಲ್ಲಾಹ್, ಅಲ್ಲಾಹನು ನಮ್ಮ ಮಗನನ್ನು ಶಹಾದತಿಗಾಗಿ ಆಯ್ಕೆ ಮಾಡಿದನು. ಅವನ ಆತ್ಮ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರೇಮದಲ್ಲಿ ಹದಿನಾಲ್ಕು ಶತಮಾನಗಳ ಹಿಂದಿನ ಮಕ್ಕ ಮತ್ತು ಮದೀನದ ಗಲ್ಲಿಗಳಲ್ಲಿ ಸುತ್ತುತ್ತಿತ್ತು. ಅವನ ಶರೀರ ಪ್ರೇಮದ ರೂಪವಾಗಿತ್ತು. ಶಹೀದ್‌ರ ತಾಯಿ ಹೇಳುತ್ತಾರೆ: ಮಗನ ಮರಣದ ನಂತರ, ಅವನಿಗೆ ಖಲೀಫತುಲ್ ಮಸೀಹ್‌ರೊಡನೆ ಎಷ್ಟು ಪ್ರೀತಿಯಿತ್ತು ಎಂದು ನನಗೆ

ಹೆಚ್ಚು ಗೊತ್ತಾಯಿತು. ದಿವಂಗತರ ಸಹೋದರಿ ನುದ್‌ರತ್ ಸಾಹಿಬ ಹೇಳುತ್ತಾರೆ: ತಾಲಿಅ್‌ರ ಧಾರ್ಮಿಕ ಅರಿವು ಬಹಳ ವಿಶಾಲವಾಗಿತ್ತು. ಹದೀಸುಗಳ ಆಳವಾದ ಅಧ್ಯಯನ ಮಾಡಿದ್ದರು. ಅರಬಿ ಭಾಷೆ ಮತ್ತು ಅದರ ವ್ಯಾಕರಣದಲ್ಲಿ ನುರಿತರಾಗಲು ಪ್ರಯತ್ನಿಸುತ್ತಿದ್ದರು. ಅವರು ತನ್ನ ಎಲ್ಲ ಬೌದ್ಧಿಕ (ಬುದ್ಧಿಪರವಾದ) ಯೋಗ್ಯತೆಗಳನ್ನು ಅಲ್ಲಾಹನ ಸಾಮೀಪ್ಯ ಮತ್ತು ಜಮಾಅತಿನ ಸೇವೆಗಾಗಿ ಉಪಯೋಗಿಸಿದರು. ಶಹಾದತಿನ ಕುರಿತು ಕನಸನ್ನು ಸಹ ತಾಲಿಅ್ ಕಂಡಿದ್ದರು. ಅದೇನೆಂದರೆ, ಅವನು ಖುದ್ದಾಮುಲ್ ಅಹ್ಮದಿಯದ ಬಟ್ಟೆಯನ್ನು ಧರಿಸಿ ಧ್ವಜವನ್ನು ಎತ್ತಿಕೊಂಡು ಸ್ವರ್ಗದಲ್ಲಿ ಪ್ರವೇಶಿಸುತ್ತಿದ್ದಾನೆ. ಪ್ರತಿಯೊಬ್ಬರೂ ಅವನನ್ನು ಅವನ ಪತ್ನಿಯ ತಂದೆಯ ಹೆಸರಿನಲ್ಲಿ ಕರೆಯುತ್ತಿದ್ದರು. ಎಂದರೆ ಗುಲಾಂ ಖಾದಿರ್ ಬಂದರು ಎಂದು ಹೇಳುತ್ತಿದ್ದರು.

ತಾಲಿಅ್‌ರ ಕಿರಿಯ ಸಹೋದರಿ ಹೇಳುತ್ತಾಳೆ: ಅವರು ಅತ್ಯುತ್ತಮ ಮಾದರಿಯಾಗಿದ್ದರು. ಆಫೀಸಿಗೆ ಹೋಗುವಾಗಲೂ ಬರುವಾಗಲೂ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್‌ರ ದರ್ಸುಲ್ ಖುರ್‌ಆನ್ ಆಲಿಸುತ್ತಿದ್ದರು. ಆಬಿದ್ ವಹೀದ್ ಸಾಹಿಬ್ ಹೇಳುತ್ತಾರೆ: ಹೆಚ್ಚಾಗಿ ಡೊಕ್ಯುಮೆಂಟರಿ ಪ್ರೋಗ್ರಾಂ ತಯಾರಿಸುವಾಗ ಅವರು 18, 19 ಗಂಟೆಗಳ ಕಾಲ ಕೆಲಸ ಮಾಡುತ್ತಿರುವುದಾಗಿ ನಾನು ನೋಡಿದ್ದೇನೆ. ಮಿರ್ಝಾ ತಲ್‌ಹ ಅಹ್ಮದ್ ಸಾಹಿಬ್ ಹೇಳುತ್ತಾರೆ: ತಾಲಿಅ್‌ರಿಗೆ ಸ್ಕ್ರಿಪ್ಟ್ ರೈಟಿಂಗ್ (script writing) ಮತ್ತು ಸ್ಟೋರಿ ಟೆಲ್ಲಿಂಗ್‌ನಲ್ಲಿ ಪ್ರಾವೀಣ್ಯತೆ ಇತ್ತು. ನಸೀಂ ಬಾಜ್‌ವ ಸಾಹಿಬ್ ಹೇಳುತ್ತಾರೆ: ನಾನು ಮುಬಲ್ಲಿಗ್ ಎಂಬ ನೆಲೆಯಲ್ಲಿ ಅವರನ್ನು ಹುಡುಗನ ಹಾಗೆ ನೋಡಿದ್ದೆ. ಸಮಯನಿಷ್ಠೆ ಹೊಂದಿದ, ಗಾಂಭೀರ್ಯದ, ಬುದ್ಧಿವಂತ, ಧಾರ್ಮಿಕ ಜ್ಞಾನದ ಆಸಕ್ತಿ ಹೊಂದಿದ, ಅನುಸರಣೆ ಮಾಡುವ, ಅತಿಥಿ ಸತ್ಕಾರಿಯಾದ, ದೇವಸ್ಮರಣೆ, ಹಿರಿಯರ ಗೌರವ ಮತ್ತು ಚಿಂತನ ಮಂಥನ ನಡೆಸುವವನಾಗಿದ್ದನು. ಮುರಬ್ಬಿಯಾದ ನೌಶೀರ್‌ವಾನ್ ರಶೀದ್ ಸಾಹಿಬ್‌ರು ಹೇಳುತ್ತಾರೆ: ಮೂರು ವರ್ಷಗಳಿಂದ ನಿಯತವಾಗಿ ಗುರುವಾರದಂದು ಉಪವಾಸ ಇರಿಸುವುದಾಗಿ ನಾನು ತಾಲಿಅ್‌ರನ್ನು ನೋಡಿದ್ದೇನೆ.

ತಾಲಿಅ್ ಶಹೀದನು ಹಝ್ರತ್ ಪೈಗಂಬರ್(ಸ) ಮತ್ತು ಹಝ್ರತ್ ಮಸೀಹ್ ಮೌಊದ್(ಅ)ರ ದೈಹಿಕ ಮತ್ತು ಆಧ್ಯಾತ್ಮಿಕ ಕುಟುಂಬದವನಾಗಿರುವ ತನ್ನ ಹಕ್ಕನ್ನು ಈಡೇರಿಸಿದನು. ಅವನು ಹಝ್ರತ್ ಪೈಗಂಬರ್(ಸ)ರ ಕುಟುಂಬದವನಾಗಿದ್ದನು ಮತ್ತು ಅಲ್ಲಾಹನು ಅವನನ್ನು ಮುಹರ್ರಂ ತಿಂಗಳಲ್ಲಿ ತ್ಯಾಗಕ್ಕಾಗಿ ಆಯ್ಕೆ ಮಾಡಿದನು. ಅಲ್ಲಾಹನು ಅವನಿಗೆ ಹಝ್ರತ್ ಪೈಗಂಬರ್(ಸ)ರ ಪಾದಗಳಲ್ಲಿ ಜಾಗ ಕೊಟ್ಟಿರಬಹುದು ಎಂದು ಪ್ರತೀಕ್ಷಿಸುತ್ತೇವೆ. ಯಾರೋ ಹೀಗೆ ಕನಸು ಸಹ ಕಂಡಿದ್ದರು: ಹಝ್ರತ್ ಪೈಗಂಬರ್(ಸ) ಒಂದು ಜಾಗದಲ್ಲಿ ನಿಂತಿರುವರು ಹಾಗೂ ತಾಲಿಅ್ ಓಡುತ್ತಾ ಹಝ್ರತ್ ಪೈಗಂಬರ್(ಸ)ರನ್ನು ಆಲಿಂಗಿಸುತ್ತಾನೆ; ಹಝ್ರತ್ ಪೈಗಂಬರ್(ಸ) ಸಹ ಅವನನ್ನು ಆಲಿಂಗಿಸುತ್ತಾ ಹೇಳುತ್ತಾರೆ: ಬಾ ನನ್ನ ಪುತ್ರಾ, ಸುಸ್ವಾಗತ.

(ಜನಾಝ ಹಾಝಿರ್ ನಿರ್ವಹಿಸುವುದಾಗಿ ಹೇಳುತ್ತಾ ಹಝ್ರತ್ ಖಲೀಫತುಲ್ ಮಸೀಹರು ಹೇಳಿದರು:) ಅಲ್ಲಾಹನು ಅವರ ಪತ್ನಿ ಮತ್ತು ಮಕ್ಕಳ ಸಂರಕ್ಷಕ ಹಾಗೂ ಸಹಾಯಕನಾಗಲಿ, ತಂದೆ, ತಾಯಿ, ಸಹೋದರ, ಸಹೋದರಿಯರಿಗೆ ಸಹನೆ ಮತ್ತು ಧೈರ್ಯ ಕೊಡಲಿ, ಅವರ ಸಹೋದರ ಸಹೋದರಿಯರು ಹಾಗೂ ಅವರ ಮಕ್ಕಳು ಅವರ ಒಳಿತುಗಳನ್ನು ಜಾರಿಯಲ್ಲಿರಿಸುವವರಾಗಲಿ – ಆಮೀನ್.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُبِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis*** *(atba)*

*At, Masjid Mubarak, Islamabad, Tilford, UK, On 03-09-2021*

**Summarized by** *Majlis Ansarullah Bharat*

***Kannada Translation***: Moulavi Inamullah for Kannada Desk, Qadian

***Reviewed by***: M.P Ibrahim |***Layout***: U Basheer Ahmad

***Published By***: Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon